ಶ್ರೀ ಕೆ. ಎಚ್. ಹನುಮೇಗೌಡ.--ಸಾರ್ವಜನಿಕರ ಉಪಯೋಗಕ್ಕಾಗಿ ರಸ್ತೆ ಮಾಡುವುದಕ್ಕೋಸ್ಕರ ರೈತರು ಜಮೀನನ್ನು ಬಿಟ್ಟುಕೊಟ್ಟರೆ ಅಂತಹವರಿಗೆ ಗೋಮಾಳದಲ್ಲಿ ಜಮೀನನ್ನು ಕೊಡಬಹುದೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅವಶ್ಯವಿದ್ದಷ್ಟು ಗೋಮಾಳವಿಲ್ಲದಿದ್ದಾಗ ಮತ್ತು ಅತ ತಾನು ನೀಡಿದ ಸ್ವಂತ ಜಮೀನಿಗೆ ಪರಿಹಾರವನ್ನೂ ತೆಗೆದುಕೊಳ್ಳದಿರುವಾಗ, ಅತನಿಗೆ ಬೇರೆ ಜಮೀನು ಕೊಡುವುದಕ್ಕೆ ಅವಕಾಶವಿದೆಯೆ ?

†ಶ್ರೀ ಕೆ. ಎಚ್. ಪಾಟೀರ್.—ರೈತನು ತನ್ನ ಸ್ವಂತ ಜಮೀನನ್ನು ರಸ್ತೆ ಮಾಡುವುದಕ್ಕಾಗಿ ಪುಕ್ಕಟೆ ಕೊಡಬೇಕೆಂದೇನೂ ಇಲ್ಲ; ಕಾನೂನು ಬದ್ಧವಾಗಿ ಪರಿಹಾರವನ್ನು ತೆಗೆದುಕೊಂಡೇ ಕೊಡಬಹುದು. ಇಂಥ ಸಂದರ್ಭದಲ್ಲಿ ಸರ್ಕಾರ ಅವನಿಗೆ ಪುನಃ ಜಮೀನು ಕೊಡುವ ಅವಶ್ಯಕತೆ ಇಲ್ಲ. ಎಲ್ಲಿ ಪರಿಹಾರ ತೆಗೆದುಕೊಳ್ಳದೆ ಜಮೀನು ಕೊಟ್ಟಿರುತ್ತಾರೆ, ಅಲ್ಲಿ ಮಾತ್ರ ಬೇರೆ ಜಮೀನು ಕೊಡುವುದಕ್ಕೆ ಅವಕಾಶವಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ಕರ್ನಾಟಕ ಭೂ ಮಂಜೂರಾತಿ ನಿಯಮದಲ್ಲಿ ಇಂತಿಂಥ ವರಿಗೆ ರಿಸರ್ವೇಷನ್ ಕೊಡಬೇಕೆಂದು ಇದೆ. ಹೀಗಿರುವುದರಿಂದ ತನ್ನ ಸ್ವಂತ ಜಮೀನನ್ನು ರಸ್ತೆ ಮಾಡುವುದಕ್ಕಾಗಿ ಪರಿಹಾರ ತೆಗೆದುಕೊಳ್ಳದೆ ಬಿಟ್ಟುಕೊಟ್ಟು, ಗೋಮಾಳದಲ್ಲೂ ಸಾಕಷ್ಟು ಜಮೀನು ಇಲ್ಲದಂಥ ಪರಿಸ್ಥಿತಿ ಇರುವಾಗ, ಕಾನೂನನ್ನು ಸ್ವಲ್ಪ ಬಿಟ್ಟು ಕೊಡುವುದಕ್ಕೆ ಅವಕಾಶ ವಿದೆಯೇ ?

ಶ್ರೀ ಕೆ. ಎಚ್. ಪಾಟೀರ್ —ರೂಲ್ಸ್ ಬಿಟ್ಟು ಕೊಡುವುದಕ್ಕೆ ಅವಕಾಶವಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ:-ಗೋಮಾಳ ಜಮೀನಿನಲ್ಲಿ 10 ಎಕರೆವರೆಗೆ ಎಸ್.ಸಿ ಎಸ್.ಟಿ ಯವರಿಗಾಗಿ ರಿಜರ್ವೇಷನ್ ಇಡಬೇಕೆಂದು ಸರ್ಕಾರದ ನಿಯಮವಿದೆ. ಆದುದರಿಂದ 6 -7 ಎಕರೆವರಗಾದರೂ ಅವರಿಗೆ ಅಲ್ಲಿ ಜಮೀನನ್ನು ಕೊಡುವುದಕ್ಕೆ ನಿಮ್ಮ ಕಾನೂನಿನ ಆದೇಶವನ್ನು ಬದ ರಾಪಣೆ ಮಾಡುವುದಕ್ಕೆ ಆಗುತ್ತದೆಯೇ ?

ಶ್ರೀ ಕೆ. ಎಚ್. ಪಾಟೀರ್.—ರೂಲ್ಸ್ ಪ್ರಕಾರವೇ ಮಾಡಬೇಕಾಗುತ್ತದೆ, ವಿಧಿನಿಯಮ ಗಳನ್ನು ಬಿಟ್ಟು ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಎಂ. ಬಿ ರಾಮಸ್ವಾಮಿ —ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆ ಯಲ್ಲಿ, ರಸ್ತೆಗಳಿಗೋಸ್ಕರವಾಗಿ ಜಮೀನು ಬಿಟ್ಟುಕೊಟ್ಟಿರತಕ್ಕಂಥವರಿಗೆ ಗೋಮಾಳ ಜಮೀನಿನಲ್ಲಿ ಜಮೀನು ಕೊಡುವುದಕ್ಕೆ ಸರ್ಕಾರದವರಿಗೆ ಅಧಿಕಾರವಿರುವುದರಿಂದ, ಅಂಥವರಿಗೆ ಒಂದೆರಡು ಎಕ ರೆಯನ್ನು ಕೊಡುವ ಬಗ್ಗೆ, ಮಾನವೀಯತೆಯ ದೃಷ್ಟಿಯಿಂದಲಾದರೂ ಆಶ್ವಾಸನೆ ಕೊಡುತ್ತಾರೆಯೇ ?

ಶ್ರೀ ಕೆ. ಎಚ್. ಪಾಟೀರ್ —ಈಗಾಗಲೇ ಉತ್ತರ ಹೇಳಿದ್ದೇನೆ ರೂಲ್ಸನ್ನು ಬಿಟ್ಟು ಕೊಡುವುದಕ್ಕೆ ಬರುವುದಿಲ್ಲ.

Rainfall and Damage to Crops in Hassan Constituency

434 SRI K H. HANUME GOWDA (Hassan).—Will the Minister for Revenue be pleased to state :—

(*a*) the quantum of rainfall during the last year and the present year (upto date) in Kattaya, Kasba and Shanti grama Hoblies of Hassan Constituency ;

(*b*) the quantum and varieties of crops damaged in these three hoblies after showing of roads by the ryots ?

SRI K. H. PATIL (Minister of Food and Forests) [on behalf of SRI N. HUTCHAMASTY GOWDA (Minister for Revenue)] —

(*a*) The details are placed on the table of the House. **

(*b*) The details are placed on the table of the House. **

ಶ್ರೀ ಕೆ ಹೆಚ್. ಹನುಮೇಗೌಡ —ಸ್ವಾಮಿ, ತಾವೇ ಉತ್ತರ ಕೊಟ್ಟಿರುವ ಪ್ರಕಾರ ಅಲ್ಲಿ ಹೆಚ್ಚು ಕಡಿಮೆ ಬೆಳೆಯೆಲ್ಲಾ ಹಾನಿಯಾಗಿದೆ. ರೈತರು ಗೊಬ್ಬರ ಬೀಜ ಮುಂತಾವುಗಳಿಗೆಲ್ಲಾ ಸಾಲ ಪಾಲದ ವ್ಯವಸ್ಥೆ ಮಾಡಿಕೊಂಡು ಬೆಳೆದಿದ್ದರು, ಆ ರೀತಿ ಬೆಳೆದಂಥ ಬೆಳೆಯೆಲ್ಲಾ ಹೋಗಿ ಬಹಳ ನಷ್ಟಕ್ಕೆ ಈಡಾಗಿದ್ದಾರೆ. ಅಂಥಾ ರೈತರಿಗೆ ಸರ್ಕಾರದವರು ಪರಿಹಾರ ಕೊಡುತ್ತಾರೆಯೇ ?

†ಶ್ರೀ ಕೆ. ಎಚ್. ಪಾಟೀಲ್.—ಬೆಳೆ ಹಾಳಾಗಿ ಹೋದಂಥವರಿಗೆ ಪರಿಹಾರ ಕೊಡುವುದಕ್ಕೆ ಅವಕಾಶವಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ – ಸ್ವಾಮಿ, ಒಬ್ಬಿ ರೈತ ಸೊಸೈಟಿಯಲ್ಲಿ 4 ಸಾವಿರ ರೂಪಾಯಿಗಳವರೆಗೆ ಸಾಲ ತೆಗೆದುಕೊಂಡು, ಸಕಾಲಕ್ಕೆ ಬೀಜ, ಗೊಬ್ಬರ ಹಾಕಿ ಬಿತ್ತನೆ ಮಾಡಿರುತ್ತಾನೆ, ಅಂಥವನಿಗೆ ಬೆಳೆ ಬಂದದ್ದು ಹಾಳಾಗಿ ಹೋಯಿತೆಂದರೆ ಪುನಃ ಅವನು ಪ್ರಯತ್ನ ಪಟ್ಟು ವ್ಯವಸಾಯ ಮಾಡಿದಾಗ 2-3-4 ಸಾರಿ ಇದೇ ರೀತಿಯಾಗಿ ಅವನು ಬಹಳ ತೊಂದರೆಗೆ ಸಿಲುಕಿಕೊಂಡಿರುತ್ತಾನೆ. ಅವನು ಸಾಲಮಾಡಿ ಸಾಲಮಾಡಿ ತಲೆ ಎತ್ತದ ಹಾಗೆ ಆಗಿರುತ್ತಾನೆ ; ಅಂಥಾ ಸಂದರ್ಭದಲ್ಲಿ ಅವನಿಗೆ ಸರ್ಕಾರದವರು ಪರಿಹಾರ ಕೊಡುವುದಕ್ಕೆ ಏನಾದರೂ ಆಲೋಚನೆ ಮಾಡುತ್ತಿದ್ದಾರೆಯೇ ಎಂದು ಪ್ರಶ್ನೆ ಕೇಳುತ್ತಿದ್ದೇನೆ

ಶ್ರೀ ಕೆ ಎಚ್. ಪಾಟೀಲ್.—ಸರ್ಕಾರ ಕಾನೂನು ಬದ್ಧವಾಗಿ ಯಾವಯಾವ ಸೌಲಭ್ಯಗಳನ್ನು ಕೊಡುವುದಕ್ಕೆ ಸಾಧ್ಯವಿದೆಯೋ ಅದನ್ನು ಕೊಡುತ್ತೇವೆ ಅವನಿಗೆ ಒಂದು ಸಾರ್ತಿ ಬೆಳೆ ಹೋದಾಗ ಪುನಃ ಇನ್ನೊಮ್ಮೆ ಬೆಳೆಗೆ ಬೇಕಾದಂಥ ಬೀಜ ಗೊಬ್ಬರಕ್ಕೆ ಸಾಲ ಕೊಡಿಸುವುದಕ್ಕೆ ವ್ಯವಸ್ಥೆ ಮಾಡಿಸಬಹುದು, ಮತ್ತೆ ಸೊಸೈಟಿಯಲ್ಲಿ ತೆಗೆದುಕೊಂಡಿರತಕ್ಕಂಥ ಇಂಟರೀಂ ಲೋನನ್ನು ಮಧ್ಯಮ ತರಗತಿಯ ಲೋನ್ ಆಗಿ ಸಹಾನುಭೂತಿಯಿಂದ ಪರಿವರ್ತಿಸುವುದಕ್ಕೆ ಸಾಧ್ಯತೆ ಇದೆ. ಹೀಗೆ ಕಾನೂನು ಬದ್ಧವಾಗಿ ಸಹಕಾರ ಕೊಡುವುದಕ್ಕೆ ಎಷ್ಟೊಷ್ಟು ಸಾಧ್ಯತೆ ಇದೆಯೋ ಅದನ್ನು ಕೊಡುತ್ತೇವೆ.

SRI D. DEVARAJ URS.—I think the Hon. member wants a kind of 'crop insurance' to be introduced. It is a very big question. It is true that many farmers get affected by way of drought and other conditions. They will have put lot of inputs and sometimes they lose everything. It involves a policy matter and also involves a lot of finance. This question of having 'crop insurance' is before both the Central and State Governments for a long number of years, but no decision has been taken on that. It will have to be an All-India policy decision.

ಶ್ರೀ ಎಂ ಬಿ. ರಾಮಸ್ವಾಮಿ.—ಸ್ವಾಮಿ ಮಂತ್ರಿಗಳು ಕ್ವಾಂಟಂ ಆಫ್ ರೇನ್ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಆಗುತ್ತದೆ ಎನ್ನುವ ಬಗ್ಗೆ ಯಾರು ರಿಕಾರ್ಡ್ ಮಾಡುತ್ತಿದ್ದಾರೆ ? ಅದರೆ ಎಲ್ಲೆಲ್ಲ ಎಷ್ಟೆಷ್ಟು ರೇನ್ ಫಾರ್ ಆಗುತ್ತಿದೆ ಎನ್ನುವ ಬಗ್ಗೆ ಯಾರು ರಿಕಾರ್ಡ್ ಮಾಡುತ್ತಿದ್ದಾರೆ ? ಅದರ ಅಂಕಿ ಅಂಶಗಳನ್ನು ಕೊಡುತ್ತೀರಾ ? ಹಾನಗಡದ ನಾಲ್ಕು ಹೋಬಳಿಗಳಲ್ಲಿ ಮಳೆ ಬೀಳುವುದನ್ನು ನೋಡಿಕೊಳ್ಳುವವರು ಯಾರು ?

**Copy placed in the Karnataka Legislature library *vide* No: 43 dated 14th July 1977

ಶ್ರೀ ಕೆ. ಎಚ್. ಪಾಟೀಲ್.—ನಮ್ಮ ರೆವಿನ್ಯೂ ಆಫೀಸರ್‌ರವರು ನೋಡಿಕೊಳ್ಳುತ್ತಾರೆ. ರೆವಿನ್ಯೂ ಆಫೀಸಿನಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಬ್ಬೊಬ್ಬ ಕ್ಲರ್ಕ್ ಇರುತ್ತಾರೆ, ಅವರು ಅದನ್ನು ರಿಕಾರ್ಡ್ ಮಾಡಿ, ಸಂಬಂಧಪಟ್ಟ ಅಧಿಕಾರಿಗಳಿಗೆ ರಿಕಾರ್ಡ್‌ಗಳನ್ನು ಕಳುಹಿಸಿಕೊಡುತ್ತಿರುತ್ತಾರೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಸ್ವಾಮಿ, ನಾನು ಕೇಳುತ್ತಿರುವುದು, ಹೋಬಳಿಗಳಲ್ಲಿ ಯಾರು ಇಲ್ಲ, ಆದೇ ಹೆಡ್‌ಕ್ವಾರ್ಟರ್ಸ್‌ಗಳಲ್ಲಿ ಮಾತ್ರ ಇದ್ದಾರೆ. ಅವಕ್ಕೋಸ್ಕರವೇ ತಮಗೆ ಹೇಳುತ್ತಿರುವುದು, ಸಂಬಂಧಪಟ್ಟ ಅಧಿಕಾರಿಗಳು ಹೋಬಳಿಗಳಿಗೂ ವಿಸಿಟ್ ಮಾಡುತ್ತಿದ್ದು, ಅಲ್ಲಿಯ ರೇನ್‌ಫಾಲ್‌ನ್ನು ರಿಕಾರ್ಡ್ ಮಾಡುತ್ತಿದ್ದರೆ ಒಳ್ಳೆಯದಲ್ಲವೇ ? ಅದಕ್ಕೋಸ್ಕರ ತಾವು ಇದರ ಬಗ್ಗೆ ಸ್ಪಷ್ಟೀಕರಣವನ್ನು ಮಾಡಿದರೆ ಒಳ್ಳೆಯದು. ಅಲ್ಲಿ ಈಗ ಯಾರೂ ರಿಕಾರ್ಡ್ ಮಾಡುತ್ತಿಲ್ಲ.

ಶ್ರೀ ಕೆ. ಎಚ್ ಪಾಟೀಲ್.—ಸ್ಪಷ್ಟೀಕರಣದ ಪ್ರಶ್ನೆಯೇ ಇಲ್ಲ. ಪ್ರತಿಯೊಂದು ಹೋಬಳಿಯಲ್ಲೂ ರೇನ್ ಫಾಲ್‌ನ್ನು ರಿಕಾರ್ಡ್ ಮಾಡಬೇಕೆಂದರೆ ಅದನ್ನು ವಿಚಾರ ಮಾಡೋಣ, ಈಗ ತಾಲ್ಲೂಕ್ ಮಟ್ಟದಲ್ಲಿ ಮಾತ್ರವಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ಒಂದು ವರ್ಷ ಏನಾದರೂ ಮಳೆ ಹೋದರೆ ಮುಂದಿನ ವರ್ಷಕ್ಕೆ ಆ ರೀತಿ ಸಾಲ ತೆಗೆದುಕೊಂಡಂಥ ರೈತನಿಗೆ ಇಂಟ್ರನ್ಸ್ಟ್‌ನ್ನು ಪೋಸ್ಟ್‌ಪೋನ್ ಮಾಡುತ್ತೀರಿ. ಆದರೆ ನಮ್ಮ ದೇಶದ ಕೆಲವು ಭಾಗದಲ್ಲಿ ವರ್ಷೇ ವರ್ಷೇ ಮಳೆ ಹೋಗುತ್ತಿದೆ, 1-2 3 ವರ್ಷಗಳವರೆಗೆ ಮಳೆ ಸರಿಯಾಗಿ ಆಗದೆ ರೈತ ಬಹಳ ನಷ್ಟಕ್ಕೆ ಈಡಾಗಿದ್ದಾನೆ. ಆದುದರಿಂದ ಮಾನ್ಯ ಮುಖ್ಯ ಮಂತ್ರಿಗಳವರು ಹೇಳಿದ ಹಾಗೆ ಒಂದು ಕ್ರಾಪ್ ಇನ್ಷೂರೆನ್ಸ್ ಯೋಜನೆಯನ್ನಾದರೂ ಜಾರಿಗೆ ತರಬೇಕು. ಇಲ್ಲದಿದ್ದರೆ ರೈತರು ತಲೆ ಎತ್ತುವುದಕ್ಕೆ ಆಗುವುದಿಲ್ಲ, ಸಾಲದ ಭಾರದಲ್ಲಿಯೇ ಸಾರ್ವಜನಿಕವಾಗಿ ಹೋಗುತ್ತಾನೆ. ಈಗ ತಾವೇನೋ ಒಂದು ವರ್ಷ ಮಳೆ ಹೋದರೆ ಒಂದು ವರ್ಷದ ಮಟ್ಟಿಗೆ ಕಂದಾಯವನ್ನು ಮಾಡಿ ಆ ಮೇಲೆ ಅದನ್ನು ವಸೂಲು ಮಾಡುತ್ತೀರಿ. 2-3 ವರ್ಷಗಳ ವರೆಗೆ ಮಳೆ ಹೋಗಿ ಬೆಳೆಯಾಗದಿದ್ದರೆ ಅವನು ತೆಗೆದುಕೊಂಡಂಥ ಸಾಲವನ್ನು ಮರು ಪಾವತಿ ಮಾಡಲಿದ್ದರೆ ಅವನ ದನ ಕರುಗಳನ್ನು ಹರಾಜು ಮಾಡುತ್ತೀರಿ. ಆದುದರಿಂದ ಅಂಥ ರೈತರಿಗೆ ತಾವು ಬೇರೆ ಯಾವುದಾದರೂ ರೀತಿಯಲ್ಲಿ ಪರಿಹಾರ ಕೊಡುವುದಕ್ಕೆ ಸಾಧ್ಯವೇ ಎಂದು ಕೇಳುತ್ತಿದ್ದೇನೆ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ, ಈಗ ಸಾಲ ತೆಗೆದುಕೊಂಡಿರತಕ್ಕವರಿಗೆ, ತೊಂದರೆಯಾದಲ್ಲಿ 2 3 ವರ್ಷಗಳವರೆಗೆ ಅದನ್ನು ಮುಂದುವರಿಸುವುದಕ್ಕೆ ಅವಕಾಶವಿದೆ. ಸಾಲವನ್ನು ಕಂತುಗಳ ರೂಪದಲ್ಲಿ ಕಟ್ಟುವುದಕ್ಕೆ ಅವಕಾಶವಿದೆ- ಮಧ್ಯಮಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಪರಿವರ್ತನೆ ಮಾಡುವುದಕ್ಕೂ ಅವಕಾಶವಿದೆ. ಆದರೆ ದುರ್ದೈವದ ಸಂಗತಿ ಎಂದರೆ, ಯಾರೇ ಲೋನ್ ತೆಗೆದುಕೊಳ್ಳಲಿ ಅವರು ಸರಿಯಾಗಿ ಹಣವನ್ನು ಮರು ಪಾವತಿ ಮಾಡುತ್ತಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ —ಅಧ್ಯಕ್ಷರೇ, ಇದು ಬಹಳ ಗಹನವಾದ ವಿಚಾರ. ಸಾಲ ತೆಗೆದುಕೊಂಡಂಥವನು ಬಡ್ಡಿ ಕಟ್ಟುವುದಕ್ಕೂ ನಿಸ್ಸಹಾಯಕನಾಗಿರುವಾಗ, ಅವನಿಂದ 2-3 ವರ್ಷಗಳಾದ ಮೇಲೆ ಒಟ್ಟಿಗೇ ಹಣವನ್ನು ಕಟ್ಟುವುದಕ್ಕೆ ಆಗುವುದಿಲ್ಲ, ಅದಕ್ಕೋಸ್ಕರವೇ ನಾನು ಹೇಳುತ್ತಿರುವುದು, ಕಷ್ಟ ಪಟ್ಟಿದ್ದರೂ 2-3 ವರ್ಷಗಳವರೆಗೆ ಬೆಳೆ ಹಾನಿಯಾಗಿ ಹೋಗುತ್ತಿರುವವರಿಗೆ ಸರ್ಕಾರದವರು ಏನಾದರೂ ಪರಿಹಾರ ಕೊಡುತ್ತಾರೆಯೇ ಎಂದು ?

ಶ್ರೀ ಡಿ. ದೇವರಾಜ್ ಅರಸ್.—ಅಧ್ಯಕ್ಷರೇ, ಈ ವಿಚಾರದ ಬಗ್ಗೆ ಸರ್ಕಾರದವರು ಪರಿಶೀಲನೆ ಮಾಡಿಕೊಳ್ಳುವುದಕ್ಕೆ ಇಟ್ಟುಕೊಳ್ಳುತ್ತೇವೆ. ಒಂದು ಸಾರಿ ಶ್ರೀಮಾನ್ ದೇವೇಗೌಡರವರು ಕೂಡ ಇದೇ ಅಭಿಪ್ರಾಯದಲ್ಲಿ ಇದರ ಬಗ್ಗೆ ಒಂದು ಸಲಹೆ ಕೊಟ್ಟಿದ್ದರು ಎಂದು ನನಗೆ ಜ್ಞಾಪಕಕ್ಕೆ ಬರುತ್ತಿದೆ. ಸ್ಮಾಲ್ ಫಾರ್ಮರ್ಸ್ ಮತ್ತು ಮಾರ್ಜಿನಲ್ ಫಾರ್ಮರ್ಸ್ ಇಂಥವರುಗಳು ಸಾಲವನ್ನು ತೆಗೆದುಕೊಂಡಿದ್ದು ಮರು ಪಾವತಿ ಮಾಡುವುದಕ್ಕೆ ತೊಂದರೆಯಾದಾಗ, ಅವರ ಬೆಳೆ ಹೋದಾಗ

ಬಹಳ ತೊಂದರೆಯಾಗುತ್ತದೆ. ಈಗ ನಾವು 2 ಸಾವಿರದ 400 ರೂಪಾಯಿಗಳವರೆಗೆ ಇನ್ ಕಂ ಇರತಕ್ಕಂಥವರ ಬೆಳೆ ಹೋದರೆ ಕಂದಾಯವನ್ನು ಸಾಲವನ್ನು ಮನ್ನಾ ಮಾಡಬೇಕೆಂದು ಮಾಡಿದ್ದೇವೆ. ಆದುದರಿಂದ ಮಾನ್ಯ ಸದಸ್ಯರು ಹೇಳಿರತಕ್ಕಂಥ ವಿಚಾರದ ಬಗ್ಗೆ ಯೋಚನೆ ಮಾಡುತ್ತೇವೆ.

Payment of Salaries of Town Municipal Council in Muldebihal Town.

455 SRI M. M. SAJJAN. (Muddebihal)—Will the Minister for Municipal Administration and Political Pension be pleased to state.-

(*a*) whether it is a fact that salaries/wages of the employees of T. M. Cs. of Muldebihal town and Talikot town are not paid regularly and completely on due dates ;

(*b*) if so, the reasons for non-payment of wages/salaries in due dates and the steps taken to ensure that their salaries/wages are paid in full regulary and completely on due date ?

SRI D K. NAIKAR—(Minister for Municipal Administration and Political Pension).

(*a*) No

(*b*) Does not arise in view of the reply given to clause (a)

SRI M. M. SAJJAN. These are TMCs of my constituency. I have personally visited these places and the employees had represented to me that they have not been paid their salaries fully for the simple reason that D. A. grants have not been given by the Government to the Municipalitie, and under those circumstances the staff have not been paid. May I know whether the D. A. grants have been paid to these Municipalities for the last four years ?

SRI D. K. NAIKAR.—For the question that they have not been regularly paid, the answer given is yes' But it is not a fact that they have not been paid at all. They have been paid salaries not on the 1st, but on 10th or 15th. In fact there are no arrears to the employees. That is why I have said, regularly not paid, but irregularly paid, Another question he has raised is about the D. A grant I may inform him that provisional grant has been released and some balance grant is yet to be released. Instructions are being given to Divisional Commissioners to release the amount.

SRI M. M. SAJJAN.—The hon. Minister has just now said that they have been irregularly paid but my problem is that they are not completely paid every month. Supposing an employee is entitled to receive Rs. 200, he is paid only Rs. 150 and another Rs. 50 is not paid to him because they have no amount to pay.